# ದಿನಾಂಕ:-04-06-2022 (ಶನಿವಾರ) ರಂದು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆ ನಡವಳಿಗಳು

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:- 04-06-2022 ಶನಿವಾರ 10.30 ಗಂಟೆಗೆ ನೋಡೆಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗದ ಕಛೇರಿಯಲ್ಲಿ ನಡೆದಿರುತ್ತದೆ.

**<u>ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ</u>**

| ಕ್ರ.ಸಂ | ಅಧಿಕಾರಿಗಳು ಮತ್ತು ಸದಸ್ಯರ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ. ರಾಧಕೃಷ್ಣ | ನೋಡಲ್ ಅಧಿಕಾರಿ | ಕಾರ್ಯಪಾಲಕ ಅಭಿಯಂತರರು ಚಾಮರಾಜಪೇಟೆ ವಿಭಾಗ | ಹಾಜರಾಗಿರುತ್ತಾರೆ |
| 2 | ಶ್ರೀಮತಿ. ಜೆ.ಎಸ್. ಚೈತ್ರ | ಕಾರ್ಯದರ್ಶಿ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 3 | ಶ್ರೀ. ಮಾರುತಿ ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 4 | ಶ್ರೀ. ಸಂದೀಪ್ ಕುಮಾರ್ | ಸದಸ್ಯರು | ಕಿ.ಆ.ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 5 | ಶ್ರೀ. ಸ್ವಾಮಿ ಗೌಡ | ಸದಸ್ಯರು | ಹೆಲ್ತ್ ಇನ್ಸಫೆಕ್ಟರ್ | ಹಾಜರಾಗಿರುತ್ತಾರೆ |
| 6 | ಅನನ್ಯ.ಬಿ.ಕೆ. | ಸದಸ್ಯರು | ಸ.ಅ.(ಗುತ್ತಿಗೆ ಆದರದ ಮೇಲೆ) | ಹಾಜರಾಗಿರುತ್ತಾರೆ |
| 7 | ಶ್ರೀ. ಶಿವಕುಮಾರ್ | ಸದಸ್ಯರು | ಎಸ್2 | ಹಾಜರಾಗಿರುತ್ತಾರೆ |
| 8 | ಶ್ರೀ. ರಾಹುಲ್ ರಾಥೋಡ್ | ಸದಸ್ಯರು | ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಹಾಯಕ ಅಭಿಯಂತರರು | ಹಾಜರಾಗಿರುತ್ತಾರೆ |
| 9 | ಶ್ರೀ. ಶಿವಕುಮಾರ್ | ಸದಸ್ಯರು | ಎಸ್2 | ಹಾಜರಾಗಿರುತ್ತಾರೆ |
| 10 | ಶ್ರೀ. ಶ್ರೇಯಸ್ಸ್ | ಸದಸ್ಯರು | ಸ.ಅಭಿಯಂತರರು | ಹಾಜರಾಗಿರುತ್ತಾರೆ |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:-04-06-2022 ರ ಸಭೆಯ ಸೂಚನಾ ಪತ್ರವನ್ನು ವಾರ್ಡ್ ಸಂಖ್ಯೆ : 132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ ಹಾಗೂ ವಾರ್ಡ್ ಸಂಖ್ಯೆ : 132 ವಾಟ್ಸ್ ಆಫ್ ಗ್ರೂಪ್‌ಗೆ ಸದರಿ ಸಭೆಯ ಸೂಚನಾ ಪತ್ರವನ್ನು ಹಾಕಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ್ ಕಾರ್ಯದರ್ಶಿ ರವರು ಸಭೆಗೆ ಹಾಜರಿದ್ದ ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನು ಸ್ವಾಗತಿಸಿದರು.

**ಸಭೆಯಲ್ಲಿ ಸಾರ್ವಜನಿಕ ದೂರುಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.**

1. **ಆರೋಗ್ಯ ಇಲಾಖೆ** : ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರತಿ ವಾರ್ಡಿನಲ್ಲಿ ತೆರೆಯ ಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ. ಮಾರುತಿ ಸೇಟ್ ರವರು ತಿಳಿಸಿರುತ್ತಾರೆ. ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡೆಲ್ ಅಧಿಕಾರಿಯವರು ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ಸೂಚಿಸಿರುತ್ತಾರೆ.

ಕ್ರಮ : ಆರೋಗ್ಯ ವೈಧ್ಯಾಧೀಕಾರಿ ಇಲಾಖೆ

2. **ಕಾಮಗಾರಿ ಇಲಾಖೆ** : ಗಂಗೊಂಡನಹಳ್ಳಿ ಅಮಿನ ಬಾಯ್ ಮೋರಿಗೆ ಫ್ಯಾಕ್ಟರಿಯಿಂದ ಬರುವ ಕಲುಷಿತ ವಸ್ತುಗಳನ್ನು ನೇರವಾಗಿ ಮೋರಿಗೆ ಬಿಡುತ್ತಿರುವುದರಿಂದ ಪೌರ ಕಾರ್ಮಿಕರಿಗೆ ಕಸವನ್ನು ತೆಗೆಯಲು ಕಷ್ಟವಾಗುತ್ತಿದೆ ಎಂದು ಶ್ರೀ. ಸಂದೀಪ್ ರವರು ತಿಳಿಸಿದರು ಈ ಕುರಿತು ಅಗತ್ಯ ವಹಿಸಲು ನೋಡೆಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಕ್ರಮ : ಕಾಮಗಾರಿ ಇಲಾಖೆ

3. **ಬೆಸ್ಕಾಂ ಇಲಾಖೆ** : ಕೆ.ಇ.ಬಿ. ರವರು ಮರವನ್ನು ಕತ್ತರಿಸಿ ರಸ್ತೆಯಲ್ಲಿ ಹಾಕಿ ಹೋಗುತ್ತಿರುವುದರಿಂದ ಜನ ಸಾಮನ್ಯರಿಗೆ ಮತ್ತು ವಾಹನಗಳ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದೆ ಎಂದು ಶ್ರೀ. ಸಂದೀಪ್ ರವರು ತಿಳಿಸಿದರು ಈ ಕುರಿತು ಅಗತ್ಯ ವಹಿಸಲು ನೋಡೆಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಕ್ರಮ : ಬೆಸ್ಕಾಂ ಇಲಾಖೆ

ಸಭೆಗೆ ಗೈರು ಹಾಜರಾಗಿರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತೀವ್ರ ಅಸಮದಾನ ವ್ಯಕ್ತಪಡಿಸಿದ್ದು, ಮುಂದಿನ ಸಭೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ತಪ್ಪದೆ ಹಾಜರಾಗುವಂತೆ ಸಭೆಯು ತೀರ್ಮಾನಿಸಿರುತ್ತದೆ. ಗೈರು ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅವರ ಇಲಾಖೆಗಳ ಮೇಲಾಧಿಕಾರಿಗಳಿಗೆ ವರದಿ ಮಾಡಲಾಗುವುದೆಂದು ನೊಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಹಾಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಸಂಬಂಧಪಟ್ಟ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡಲ್ ಅಧಿಕಾರಿರವರ ಆದೇಶದ ಮೇರೆಗೆ**

07/06/22

**ಕಾರ್ಯದರ್ಶಿ**

**ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ**

**ಪ್ರತಿಯನ್ನು:-**

1. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ಅಭಿಯಂತರರು (ದಕ್ಷಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
5. ಕಛೇರಿ ಕಡತಕ್ಕಾಗಿ.